# ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ

## ಹಿರಿಯೂರು

## ಸಿಸಿ ನಂಃ 13/2023

ಪಿರ್ಯಾದುದಾರಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

ಆರೋಪಿತರುಃ **ಕೃಷ್ಣಸಾಗರ್ ವಿಶ್ವಂಬರ್ ಕೃಷ್ಣಾವತ್**
ತಂದೆ ಕೃಷ್ಣಸಾಗರ್ ಕೃಷ್ಣನಾಥ್, 36 ವರ್ಷ,
ಎಂ.ಹೆಚ್.45.ಎ.ಎಲ್.6367 ಕಾರು ಚಾಲಕ
ವಾಸಃ ಶೆಂಡೆಚಿಂಚ್ ಗ್ರಾಮ, ಮಲ್ಶಿರಾಸ್ ತಾಲ್ಲೂಕು,
ಸೊಲ್ಲಾಪುರ ಜಿಲ್ಲೆ ಮಹರಾಷ್ಟ್ರ-413113

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ

**ಪ್ರ** 1. ಪಿರ್ಯಾದುದಾರರ ಪರವಾಗಿ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಹೇಳಿಕೆಗಳನ್ನು ನೀವು ಕೇಳಿಸಿಕೊಂಡಿದ್ದೀರಾ?

ಉತ್ತರಃ

**ಪ್ರ 2.**ಚಾಸಾ.1/ಫ್ರಾಸಾ.1 ಚೇತನ್ ರಾಮದಾಸ್ ರಾವ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಪಾಂಡುರಂಗ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆಂದು ಅವರು ಅಂದಾಜು 1 ವರ್ಷದ ಹಿಂದೆ ಅವರು ಮತ್ತು ಪಾಂಡುರಂಗ ಇಬ್ಬರು ಸೇರಿ ಹುಂಡೈಯ್ ಕಾರ್ ನಲ್ಲಿ ಅವರು ಊರಿನಿಂದ ಚೆನ್ನೈಗೆ ಹೋಗುತ್ತಿದ್ದರೆಂದು ರಾ.ಹೆದ್ದಾರಿ -4 ರ ಮೇಲೆ ಹಿರಿಯೂರು ದಾಟಿ ಸ್ವಲ್ಪ ದೂರ ಹೋದಾಗ ನಮ್ಮ ಕಾರ್ ಅಪಘಾತಾಕ್ಕೀಡಾಯಿತೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 3.**ಚಾಸಾ.1/ಫ್ರಾಸಾ.1 ರವರನ್ನು ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ತಮ್ಮ

ಪಾಟೀ ಸವಾಲಿನಲ್ಲಿ ದಿಃ03.08.2022 ರಂದು ಸಂಜೆ 5 ಗಂಟೆ ಸಮಯದಲ್ಲಿ ಅವರು ಮತ್ತು ಅವರ ಸ್ನೇಹಿತ ಕ್ಷೀರಸಾಗರ್, ವಿಶ್ವಾಂಬರ್, ಕ್ಷಷ್ಣಾವತ್ ಹಾಗೂ ಸಂಬಂಧಿಕರಾದ ಪಾಂಡುರಂಗ ಕ್ಷೀರಸಾಗರ್ ರವರ ವಿಶ್ವಂಬರ್ ರವರ ಬಾಬ್ತು ಕಾರ್ ನಂ.ಎಂ ಹೆಚ್ .45. ಎಲ್.6367 ರಲ್ಲಿ ಅವರ ಗ್ರಾಮದಿಂದ ಹೊರಟು ರಾ.ಹೆದ್ದಾರಿ–4 ರ ಮಾರ್ಗವಾಗಿ ದಿಃ04.08.2022 ರಂದು ಬೆಳಗ್ಗೆ 5.20 ಕ್ಕೆ ಹಿರಿಯೂರು ತಾಲೂಕಿನ ಆನೆ ಸಿದ್ರಿ ಗೇಟ್ ಬಳಿ ಹೋಗುತ್ತಿದ್ದರು ಎಂದರೆ ನಿಜವೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 4.**ಚಾಸಾ.3/ಪ್ರಾಸಾ.3 ರಾಮಕೃಷ್ಣ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2, 3 ರ ದಾಖಲೆಗಳನ್ನು ತೋರಿಸಲಾಗಿ ನಿಪಿ.2(ಬಿ) ಮತ್ತು 3(ಬಿ) ಸಹಿಗಳು ಅವರದೆಂದು ಅಂದಾಜು 2 ವರ್ಷಗಳ ಹಿಂದೆ ಶನೇಶ್ವರ ದೇವಸ್ಥಾನದ ಸಮೀಪ ಅಂದರೆ ಆನೆಸಿದ್ರಿ ಗೇಟ್ ಬಳಿ ಈ ದಾಖಲಾತಿಗಳಿಗೆ ಸಹಿ ಮಾಡಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 5.**ಚಾಸಾ.3/ಪ್ರಾಸಾ.3 ರವರನ್ನು ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ತಮ್ಮ ಪಾಟೀ ಸವಾಲಿನಲ್ಲಿ ದಿಃ04.08.2022 ರಂದು ಅಪಘಾತದ ಸ್ಥಳದಲ್ಲಿ ನಿಪಿ.2, 3 ದಾಖಲಾತಿಗಳಿಗೆ ಸಹಿ ಮಾಡಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 6.**ಚಾಸಾ.4/ಪ್ರಾಸಾ.4 ಮಹಲಿಂಗಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2, 3 ರ ದಾಖಲೆಗಳನ್ನು ತೋರಿಸಿದ್ದು ನಿಪಿ.2(ಸಿ) ಮತ್ತು 3(ಸಿ) ಸಹಿ ಅವರದೆಂದು ಅಂದಾಜು 2 ವರ್ಷಗಳ ಹಿಂದೆ ಶನೇಶ್ವರ ದೇವಸ್ಥಾನದ ಸಮೀಪ ಅಂದರೆ ಆನೆಸಿದ್ರಿ ಗೇಟ್ ಬಳಿ ಅಪಘಾತವಾದ

ಕಾರಣಕ್ಕೆ ಸಹಿ ಮಾಡಿರುತ್ತಾರೆಂದು ಪೊಲೀಸರು ಪಂಚನಾಮೆ ಮಾಡಿದ್ದು ಸಹಿ ಮಾಡಿ ಎಂದು ದಾಖಲೆಗೆ ಸಹಿ ಪಡೆದಿರುತ್ತಾರೆಂದು ನಿಪಿ.4 ರಂತೆ ಪೋಟೋದಲ್ಲಿ ಅವರು ಇದ್ದಾರೆಂದು ಅವರ ಪೋಟೊವನ್ನು ಶನೇಶ್ವರ ದೇವಸ್ಥಾನದ ಬಳಿ ತೆಗೆದಿರುತ್ತಾರೆಂದು ಪೊಲೀಸರು ಮಹಜರ್ ಮಾಡಿದ ಕಾಲಕ್ಕೆ ಸದರಿ ಪೋಟೋ ತೆಗೆದಿದ್ದಾರೆ ಎಂದು  ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 7.**ಚಾಸಾ.15/ಪ್ರಾಸಾ.6 ಲೊಕೇಶ್ ಹೆಚ್.ವಿ  ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 04.08.2022  ರಂದು ಬೆಳಿಗ್ಗೆ 7.30 ರ ಸಮಯದಲ್ಲಿ ಹೆಚ್ ಸಿ 1367 ಗೌರೀಶ್ ರವರು ಹೇಳಿಕೆ ದೂರು ಪಡೆದು ಹಾಜರು ಪಡಿಸಿದ್ದು ಅದನ್ನು ಠಾಣಾ ಗುನ್ನಾ ನಂ.250/2022 ರಂತೆ  ಪ್ರಕರಣ ದಾಖಲಿಸಿರುತ್ತಾರೆಂದು ಪ್ರ ವ ವರದಿ ಯನ್ನು ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆಂದು ನಿಪಿ-1(ಬಿ) ಸಹಿ ಅವರದೆಂದು  ನಿಪಿ-15 ಪ್ರ ವ ವರದಿಯನ್ನು ಎಂದು ನಿಪಿ-15(ಎ) ಸಹಿ ಅವರದೆಂದು ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ.3, 4 ರವರ ಸಮಕ್ಷಮ ಸುಮಾರು 10 ರಿಂದ 11 ಗಂಟೆ ಸಮಯದಲ್ಲಿ ಚಾಸಾ.2 ರವರು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಎಂ ಹೆಚ್ 45 ಎ ಎಲ್ 6367 ನ್ನು ವಶಪಡಿಸಿಕೊಂಡಿರುತ್ತಾರೆಂದು ನಿಪಿ-3 ರಂತೆ ನಕಾಶೆ ತಯಾರಿಸಿರುತ್ತಾರೆಂದು ನಿಪಿ-2, 3 ರಲ್ಲಿ ನಿಪಿ-2(ಡಿ) ಮತ್ತು 3(ಡಿ) ಸಹಿಗಳು ಅವರದೆಂದು ಆ ದಿನ ನಿಪಿ-4 ರ ಪೋಟೋವನ್ನು ಸ್ಥಳದಲ್ಲಿ ತೆಗೆಸಿರುತ್ತಾರೆಂದು ನಂತರ ಠಾಣೆಗೆ ಬಂದು ಪಿ ಎಫ್ ಬರೆಸಿರುತ್ತಾರೆಂದು ನಂತರ ಮುಂದಿನ ತನಿಖೆಯನ್ನು ಚಾಸಾ.16 ರವರಿಗೆ ವಹಿಸಿಕೊಟ್ಟಿರುತ್ತಾರೆಂದು  ತಮ್ಮ ಸಾಕ್ಷ್ಯ ನುಡಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 8.**ಚಾಸಾ.16/ಫ್ರಾಸಾ.5 ಆನಂದ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 05.09.2022 ರಂದು ಈ ಪ್ರಕರಣದ ಕಡತವನ್ನು ಚಾಸಾ.15 ರವರಿಂದ ಪಡೆದುಕೊಂಡಿರುತ್ತಾರೆಂದು ಹಿರಿಯೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಶವಾಗಾರದಿಂದ ಪಾಂಡುರಂಗ ಶಿವಸಾಗರ್ ರವರ ಶವ ತನಿಖೆಯನ್ನು ಚಾಸಾ.5, 6 ರವರ ಸಮಕ್ಷಮ ಬೆಳಿಗ್ಗೆ 6 ರಿಂದ 8 ರ ವರೆಗೆ ಕೈಗೊಂಡಿದ್ದು ಆ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ.7, 8 ರವರ ಹೇಳಿಕೆ ಪಡೆದಿರುತ್ತಾರೆಂದು ನಿಪಿ-6 ರಂತೆ ಶವ ಪಂಚನಾಮೆ ಎಂದು ನಿಪಿ-6(ಎ) ಸಹಿ ಅವರದೆಂದು ತಮ್ಮ ಸಾಕ್ಷ್ಯನುಡಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 9.**ಚಾಸಾ.16/ಫ್ರಾಸಾ.5 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಅದೇ ದಿನ ಅಪಘಾತಕ್ಕೀಡಾದ ಕಾರನ್ನು ಪರಿಶೀಲಿಸಿ ವರದಿ ನೀಡಲು ಆರ್ ಟಿ ಒ ರವರಿಗೆ ಮನವಿ ಮಾಡಿರುತ್ತಾರೆಂದು ದಿಃ08.08.2022 ರಂದು ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ನಿಪಿ-7 ರಂತೆ ಮೃತ ಪಾಂಡುರಂಗ ಇವರ ಪಿ ಎಂ ವರದಿ ಸ್ವೀಕರಿಸಿದ್ದರೆಂದು ನಿಪಿ-7(ಎ) ಸಹಿ ಅವರದೆಂದು ಅದೇ ದಿನ ಸಾಕ್ಷಿದಾರರಾದ ಚಾಸಾ.2 ರವರ ಹೇಳಿಕೆ ಪಡೆದಿರುತ್ತಾರೆಂದು ದಿಃ04.09.2022 ರಂದು ಆರ್ ಟಿ ಒ ರವರಿಂದ ಐ ಎಂ ವಿ ವರದಿ ಸ್ವೀಕರಿಸಿದ್ದಾರೆಂದು ನಿಪಿ-8(ಎ) ಸಹಿ ಅವರದೆಂದು ತಮ್ಮ ಸಾಕ್ಷ್ಯನುಡಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 10.**ಚಾಸಾ.16/ಫ್ರಾಸಾ.5 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ20.10.2022 ರಂದು ಅಪಘಾತಕ್ಕಿಡಾದ ಎಂ.ಹೆಚ್.45.ಎ.ಎಲ್.6367 ರ ಕಾರಿನ ಮಾಲೀಕರಿಗೆ ನಿಪಿ-11 ರಂತೆ ಕಲಂ 133 ರಂತೆ ನೋಟೀಸ್ ನೀಡಿ ಅವರಿಂದ ನಿಪಿ-12 ರಂತೆ ಉತ್ತರ ಪಡೆದಿದ್ದು ನಿಪಿ-13 ರಂತೆ ಇಂಡಿಮ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತಾರೆಂದು

ನಿಪಿ–11(ಎ), 12(ಎ) ಮತ್ತು 13(ಎ) ಸಹಿಗಳು ಅವರದೆಂದು ಉತ್ತರದಲ್ಲಿ ಆರೋಪಿಯಾದ ನೀವು ಆ ದಿನ ವಾಹನ ಚಾಲನೆ ಮಾಡುತ್ತಿದ್ದರು ಎಂದು ಅದೇ ದಿನ ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆಂದು ತಮ್ಮ ಸಾಕ್ಷ್ಯ ನುಡಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

**ಪ್ರ 11.**ಚಾಸಾ.16/ಫ್ರಾಸಾ.5 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.14 ರಂತೆ ವಾಹನ ಬಿಡುಗಡೆ ಪಂಚನಾಮೆ ಎಂದು ನಿಪಿ–14(ಎ) ಸಹಿ ಅವರದೆಂದು ಚಾಸಾ.1 ಮತ್ತು ಆರೋಪಿಯಾದ ನಿಮ್ಮ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತಾರೆಂದು ನಿಪಿ–9(ಎ) ಮತ್ತು 10(ಎ) ಸಹಿ ಅವರದೆಂದು ಅದೇ ದಿನ ಆರೋಪಿ ಚಾಲನಾ ಪರವಾನಿಗೆ ಇಲ್ಲದೆ ಚಾಲನೆ ಮಾಡಿದ್ದರಿಂದ ಹೆಚ್ಚುವರಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆಂದು ತಮ್ಮ ಸಾಕ್ಷ್ಯ ನುಡಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರ 12. ನಿಮಗೆ ಏನಾದರೂ ಹೇಳುವುದು ಇದೆಯೇ ?

ಉತ್ತರಃ ನಾನು ಚಾಲನೆ ಮಾಡುತ್ತಿಲ್ಲ

ಪ್ರ 13. ನೀವು ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ ?

ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿತನಿಗೆ ಓದಿ ಹೇಳಲಾಗಿ ಆತ ನುಡಿದ ಪೂರ್ಣವಾದ ಹಾಗು ಸತ್ಯವಾದ ಹೇಳಿಕೆಗಳನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ದೃಢೀಕರಿಸಿದೆ )

ದಿನಾಂಕಃ **19.01.2026**

ಸ್ಥಳಃ ಹಿರಿಯೂರು

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಹಿರಿಯೂರು